ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **18.09.15**

ಈ ವಾರದ ಮುನ್ಸೂಚನೆ **(19-09-15 to 23.09.15 ವರೆಗೆ)**

ನಿಯತಾಂಕಗಳು	19/9/15	20/9/15	21/9/15	22/9/15	23/9/15
ಮಳೆ (ಮಿ ಮಿ)	0	3	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	28	29	28	29	29
ಕನಿಷ್ಠ ಉಷ್ಣಾಂಶ (ಡಿ.ಸೆ.)	20	18	17	17	18
ಮೋಡ (ಪ್ರಮಾಣ)	4	6	7	5	6
ಅರ್ದ್ರತೆ ೭.೨೦ ಬೆ (ಶೇ)	98	100	97	93	94
ಅರ್ದ್ರತೆ ೨.೨೦ ಮ (ಶೇ)	62	63	49	44	46
ಗಾಳಿಯ ವೇಗ (ಕಿ.ಮಿ/ಗಂಟೆಗೆ)	23	18	12	12	10
ಗಾಳಿಯ ದಿಕ್ಕು (ಡಿಗ್ರಿ)	271	264	280	266	278

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವತಾವರಣವಿರಲಿದ್ದು, ತುಂತುರು ಮಳೆಯ ನಿರೀಕ್ಷೆಯಿದೆ. ದಿನದ ಗರಿಷ್ಠ ಉಷ್ಣಾಂಶವು **28–29.0°C** ಮತ್ತು ಕನಿಷ್ಠ **17-20°C** ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **93-100%** ಇದ್ದು, ಮಧ್ಯಾಹ್ನ **44-63%** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **10-23** ಕಿ.ಮೀ.ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ **ಅಲ್ಪಾವಧಿ ಬೆಳೆಗಳಾದ ಹುರುಳಿ, ಅಲಸಂದೆ, ಸಜ್ಜೆ, ಉದ್ದು, ನವಣೆ, ಎಳ್ಳು, ಸಾಮೆ, ಹೆಸರು ಬೆಳೆಗಳನ್ನು ಬೆಳೆಯಬಹುದು**
- ✓ **ತೇವಾಂಶದ ಸಂರಕ್ಷಣೆ ಮತ್ತು ಕಳೆಗಳ ನಿರ್ವಹಣೆಗೋಸ್ಕರ ಕುಂಟೆ ಹಾಯಿಸುವುದು.**
- ✓ **ಕಿತ್ತಿರುವ ಕಳೆ ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರಿಸಿಡಿಯಾ (ಹಸಿರೆಲೆ ಗೊಬ್ಬರ) ಸೊಪ್ಪನ್ನು ಉಪಯೋಗಿಸಿಕೊಂಡು ಸಾಲುಗಳ ಮಧ್ಯದಲ್ಲಿ ಭೂ ಹೊದಿಕೆಯಾಗಿ ಹರಡುವುದು.**

ಬಿತ್ತನೆ ಮಾಡಬೇಕಾದ ಅಲ್ಪಾವಧಿ ಬೆಳೆಗಳು:

ರಾಗಿ: ಇಂಡಾಫ್ಲ್–೭, ಇಂಡಾಫ್ಲ್–೯, ಇಂಡಾಫ್ಲ್–೧೫, **ಹುರುಳಿ**– ಕೆ.ಬಿ.ಹೆಚ್–೧, ಫ್.ಹೆಚ್.ಜಿ.–೯, **ಅವರೆ**–ಹೆಚ್.ಎ–೧, ೩, ೪

ಪಾಪ್‌ಕಾರ್ನ್: ಅಂಬರ್. **ಅಲಸಂದೆ**: ಟಿ.ವಿ.ಎಕ್ಸ್–೯೪೪, ಕೆ.ಎಮ್–5, ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಸಸ್ಯ ಸಂರಕ್ಷಣೆ:

- ✓ ತೊಗರಿಯಲ್ಲಿ ಸೊರಗು ರೋಗ ಇರುವ ಕಡೆ ಕಾರ್ಬೆಂಡೇಜಿಮ್ (1ಮಿ.ಲೀ. ಪ್ರತಿ ಲೀಟರ್ ನೀರಿಗೆ) ತೊಗರಿ ಗಿಡದ ಬುಡದಲ್ಲಿರುವ ಮಣ್ಣಿಗೆ ಸೇರಿಸುವುದು.
- ✓ **ಗೂಡು ಮಾಡುವ ಹುಳು** ಕಂಡುಬಂದರೆ ಕ್ವಿನಾಲ್ಫಾಸ್ (2 ಮಿ.ಲೀ/ಲೀ) ಸಿಂಪಡಿಸಿ.

ರಸ ಹೀರುವ ಕೀಟಗಳು: ಇವುಗಳ ಹತೋಟಿಗೆ ಶೇ. 4ರಷ್ಟು ಬೇವಿನ ಕಷಾ0ಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು. ಅಂಟು ದ್ರಾವಣವನ್ನು ಲೇಪಿಸಿದ ಹಳದಿ ಬಣ್ಣದ ಅಂಟು ಬಲೆಗಳನ್ನು ಅಲ್ಲಲ್ಲಿ ಇಡುವುದರಿಂದ ಬಿಳಿನೊಣ, ರೆಕ್ಕೆ ಇರುವ ಏಫಿಡ್ಸ್ ಹಾಗೂ ಇನ್ನಿತರೆ ಕೀಟಗಳು ಆಕರ್ಷಣೆಗೊಂಡು ಆ ಬಲೆಗೆ ಅಂಟಿಕೊಳ್ಳುತ್ತವೆ. ರಸ ಹೀರುವ ಕೀಟಗಳ ಹಾವಳಿ ತೀವ್ರವಾಗಿದ್ದರೆ ಲ್ಯಾನ್ಸರ್ ಗೋಲ್ಡ್ (2ಗ್ರಾಂ ಪ್ರತಿ ಲೀಟರ್ ಗೆ).

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು